೯–೩೦ ಎ. ಎಂ.

ಶ್ರೀಮತಿ ಸುಮಾವಸಂತ.—ಮಾನ್ಯ ಅಧ್ಯಕ್ಷರೇ, ದೇವಸ್ಥಾನಗಳ ಜೀರ್ಣೋಧ್ಧಾರಕ್ಕಾಗಿ ಬಿಡುಗಡೆ ಮಾಡಿದಂಥ ಹಣವನ್ನು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಈ ಹಣವನ್ನು ಜಿಲ್ಲಾವಾರು ಬಿಡುಗಡೆ ಮಾಡಿದ್ದಾರೆಯೇ ?

ಶ್ರೀ ಕೆ. ಅಮರನಾಥ ಶೆಟ್ಟಿ.—ಜಿಲ್ಲಾವಾರು ಪಟ್ಟಿಯನ್ನು ಇದರ ಜೊತೆ ಲಗತ್ತಿಸಿದೆ. ಅದನ್ನು ತಮಗೆ ಓದಿ ಹೇಳಬೇಕೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರ ಜಿಲ್ಲೆಯದನ್ನು ಹೇಳಿ ಸಾಕು.

ಶ್ರೀ ಕೆ. ಅಮರನಾಥ ಶೆಟ್ಟಿ.—೧೯೮೭-೮೭ನೇ ಸಾಲಿನಲ್ಲಿ ಕೊಡಗು ಜಿಲ್ಲೆಗೆ ೨.೬೨ ಲಕ್ಷ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿದ್ದೇವೆ. ೧೨ ಸಂಸ್ಥೆಗಳ ಪೈಕಿ ೧೧ ಸಂಸ್ಥೆಗಳಿಗೆ ಸ್ಯಾಂಕ್ಷನ್ ಮಾಡಿದೆ. ಮುಜರಾಯಿ ಆಯುಂಕ್ತರು ೪ ಕೈ ೪೩ ಸಾವಿರ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿದ್ದಾರೆ. ೮೭–೮೮ರಲ್ಲಿ ೧೯ ಅರ್ಜಿಗಳು ಬಂದಿವೆ. ಅದರಲ್ಲಿ ೧೬ಕ್ಕೆ ೪.೬೦ ಲಕ್ಷ ರೂಪಾಯಿಗಳ ಸ್ಯಾಂಕ್ಷನ್ ಕೊಟ್ಟಿದೆ. ಮುಜರಾಯಿಯಿಂದ ೨ ಅರ್ಜಿಗಳು ಬಂದಿವೆ. ಅದರ ಪೈಕಿ ೨ಕ್ಕೂ ಸೇರಿ ೨೬ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ,

ಶ್ರೀಮತಿ ಸುಮಾವಸಂತ.—ವಂಶಪಾರಂಪರ್ಯ ಪದ್ಧತಿಗೆ ಒಳಪಟ್ಟಿರತಕ್ಕ ದೇವಸ್ಥಾನಗಳ ಅರ್ಚಕರಿಗೆ ಯಾವ ರೀತಿಯ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದೀರಿ ?

ಶ್ರೀ ಡಿ. ಎ. ಚಿನ್ನಪ್ಪ.—ದೇವಸ್ಥಾನಗಳಲ್ಲಿ ವಂಶಪಾರಂಪರ್ಯವಾಗಿ ಕೆಲಸ ಮಾಡತಕ್ಕ ಅರ್ಚಕರಿಗೆ ಕೆಲವರಿಗೆ ೫ ರೂಪಾಯಿ ಸಂಬಳ ಕೊಡುತ್ತಾರೆ, ಮತ್ತೆ ಕೆಲವರಿಗೆ ಅಕ್ಕಿ ಕೊಡುತ್ತಾರೆ. ಆದ್ದರಿಂದ ಇವರಿಗೆ ಏನಂ ಅನುಕೂಲ ಮಾಡಿಕೊಟ್ಟಿದ್ದೀರಿ ಎಂದು ಕೇಳುತ್ತಿದ್ದಾರೆ ?

ಶ್ರೀ ಕೆ. ಅಮರನಾಥ ಶೆಟ್ಟಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಇದಕ್ಕೆ ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಡಿ. ಎ. ಚಿನ್ನಪ್ಪ.—ಸ್ವಾಮಿ, ತಲಕಾವೇರಿ ದೇವಸ್ಥಾನ ಬಹಳ ಪವಿತ್ರವಾದುದು. ಇದಕ್ಕೆ ನೀವು ಹಣವನ್ನು ಕೊಟ್ಟಿಲ್ಲ. ತಲಕಾವೇರಿ ಎಂದರೆ ನಮ್ಮ ಕರ್ನಾಟಕವನ್ನು ಉದ್ಧಾರ ಮಾಡತಕ್ಕ ದೇವತೆ. ಅಲ್ಲಿಗೆ ಕರ್ನಾಟಕದವರು ಯಾರೂ ಕೂಡ ಪ್ರವಾಸಿಗರು ಬರುವುದಿಲ್ಲ. ಇದಕ್ಕೆ ೨ ಕೋಟಿ ರೂಪಾಯಿಯ ಯೋಜನೆಯನ್ನು ಮಾಡಿದ್ದೇವೆ. ಇದಕ್ಕೆ ತಾವು ಹಣವನ್ನು ಕೊಟ್ಟು ಇದನ್ನು ಇಂಪ್ರೂವ್ ಮಾಡಬೇಕು. ನಮ್ಮ ಕರ್ನಾಟಕದ ಜನರು ಅಲ್ಲಿಗೆ ಯಾರೂ ಬರದಿದ್ದರೂ ತಮಿಳ್ನಾಡು, ಕೇರಳ ರಾಜ್ಯಗಳಿಂದ ಜಸ್ತಂ ಬರುತ್ತಾರೆ. ಅವರು ಬಂದರೆ ಇಲ್ಲಿ ಇರುವುದಕ್ಕೆ ಸ್ಥಳಾವಕಾಶ ಇಲ್ಲ. ಆದ್ದರಿಂದ ತಲಕಾವೇರಿಗೆ ಹಣವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಅಮರನಾಥ ಶೆಟ್ಟಿ.—ತಲಕಾವೇರಿ ಇಂಪ್ರೂವ್ ಮಾಡುವುದಕ್ಕೆಂದು ಇದುವರೆಗೂ ನನಗೆ ಒಂದು ಅರ್ಜಿ ಕೂಡ ಬಂದಿಲ್ಲ. ಆದರೂ ನಾನೇ ಸ್ವತಃ ಹೋಗಿ ಸಂಬಂಧ ಪಟ್ಟ ಜಿಲ್ಲಾಧಿಕಾರಿಯವರಿಗೆ ಹೇಳಿ ಒಂದು ಎಸ್ಟಿಮೇಟ್‌ನ್ನು ಮಾಡಿ ಕಳುಹಿಸಿಕೊಡಿ ಎಂದು ತಿಳಿಸಿ ಬಂದಿದ್ದೇನೆ.

ರಾಜ್ಯಾದ್ಯಂತ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಣಿ

೧೬೫೪. ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ),—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯಾದ್ಯಂತ ಇರುವ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಂಡಿರುವ ಪುರುಷ ಮತ್ತು ಮಹಿಳಾ ನಿರುದ್ಯೋಗಿಗಳ ಸಂಖ್ಯೆ ಎಷ್ಟು ?

(ಜಿಲ್ಲಾವಾರು ಮಾಹಿತಿ ನೀಡುವುದು)

ಆ) ೧೯೮೭–೮೮ನೇ ಸಾಲಿನಲ್ಲಿ ಉದ್ಯೋಗವನ್ನು ನೀಡಲಾಗಿರುವ ಜನರ ಸಂಖ್ಯೆ ಎಷ್ಟು ?

ಇ) ಸರ್ಕಾರದವರು ಲೋಕ ಸೇವಾ ಆಯೋಗ, ನೇರ ನೇಮಕಾತಿ ಸಮಿತಿ ಹಾಗೂ ನೇರ ನೇಮಕಾತಿಗಳ ಮೂಲಕ ಸರ್ಕಾರಿ ಹುದ್ದೆಗಳನ್ನು ಹೆಚ್ಚು ಹೆಚ್ಚು ತುಂಬುತ್ತಿರುವುದರಿಂದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಿರುವ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ದೊರಕಿಸಿಕೊಡುವುದು ಸಾಧ್ಯವಿಲ್ಲವೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ, ಈ ಉದ್ಯೋಗ ವಿನಿಮಯ ಕೇಂದ್ರಗಳು ಸರ್ಕಾರಕ್ಕೆ ಒಂದು ಬಿಳಿಯ ಆನೆಯಂತೆ ಎಂಬುದು ನಿಜವೆ ? ಈ ಬಗ್ಗೆ ಸರ್ಕಾರದ ನಿಲುವೇನು ?

ಶ್ರೀ ಎಸ್. ಕೆ. ಕಾಂತಾ (ಮಾನ್ಯ ಕಾರ್ಮಿಕ ಸಚಿವರು).—

ಅ) ದಿನಾಂಕ ೩೧-೩-೮೮ ರಂದು ರಾಜ್ಯದ ವಿವಿಧ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಒಟ್ಟು ೯,೯೦,೨೭೬ ಅಭ್ಯರ್ಥಿಗಳು ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದಾರೆ. ಇವರುಗಳಲ್ಲಿ ೮,೦೪,೩೬೨ ಪುರುಷರು, ೧,೮೫,೯೧೪ ಮಹಿಳೆಯರು ಇರುತ್ತಾರೆ. ನೋಂದಾಯಿಸಿಕೊಂಡಿರುವ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳ ಜಿಲ್ಲಾವಾರು ಸಂಖ್ಯೆಯನ್ನು ಅನುಬಂಧ-೧ ರಲ್ಲಿ ಒದಗಿಸಲಾಗಿದೆ.

ಆ) ೧೯೮೭-೮೭ನೇ ಸಾಲಿನಲ್ಲಿ ಅಂದರೆ ೧-೪-೮೭ ರಿಂದ ೩೧-೩-೮೮ರ ವರೆಗೆ ೯೮೨ ಮಹಿಳೆಯರೂ ಸೇರಿದಂತೆ ಒಟ್ಟು ೮,೩೭೧ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ದೊರಕಿಸಿ ಕೊಡಲಾಗಿದೆ.

ಇ) ಲೋಕಸೇವಾ ಆಯೋಗ ಹಾಗೂ ನೇಮಕಾತಿ ಸಮಿತಿಗಳ ಮೂಲಕ ನೇರ ನೇಮಕಾತಿಯಿಂದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಿದ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ದೊರಕಿಸಿ ಕೊಡುವುದು ಸಾಧ್ಯವಿಲ್ಲವೆನ್ನಲು ಬರುವುದಿಲ್ಲ. ಆದರೆ, ಉದ್ಯೋಗಾವಕಾಶವು ಸೀಮಿತಗೊಂಡಿರುವುದು ನಿಜ.

ಈ) ಇಲ್ಲ. ಉದ್ಯೋಗ ವಂತ್ರ ತರಬೇತಿ ಇಲಾಖೆಗೆ ಇರುವ ಸೀಮಿತ ಪರಿಮಿತಿಯಲ್ಲಿ ಉತ್ತಮ ಸೇವೆಯನ್ನು ಸಲ್ಲಿಸಲು ಪ್ರಯತ್ನಿಸಲಾಗುತ್ತಿದೆ.

ಅನುಬಂಧ–೧

ದಿನಾಂಕ ೩೧-೩-೧೯೮೮ ರಂದು ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳ ಜೀವಂತ ದಾಖಲೆಗಳಲ್ಲಿದ್ದ ಅಭ್ಯರ್ಥಿಗಳ ಜಿಲ್ಲಾವಾರು ಅಂಕಿ ಅಂಶಗಳ ನಿರೂಪಣೆ.

ಕ್ರಮ ಸಂಖ್ಯೆ	ಜಿಲ್ಲೆಗಳ ಹೆಸರು	ಜೀವಂತ ದಾಖಲೆಯಲ್ಲಿದ್ದ ಅಭ್ಯರ್ಥಿಗಳ ಸಂಖ್ಯೆ		
		ಪುರುಷರು	ಮಹಿಳೆಯರು	ಒಟ್ಟು
೧	ಬೆಂಗಳೂರು	೨೬೪೩೮೩	೬೯೬೮೯	೩೩೮೦೭೨
೨	ಬೆಳಗಾಂ	೫೧೨೨೭	೭೨೦೪	೫೮೪೩೧
೩	ಬಳ್ಳಾರಿ	೨೧೨೨೮	೩೨೯೪	೨೪೫೨೨
೪	ಬೀದರ್	೧೬೯೬೯	೧೭೨೪	೧೮೬೯೩
೫	ಬಿಜಾಪುರ	೩೨೨೨೫	೪೦೯೫	೨೬೩೭೦
೬	ಚಿಕ್ಕಮಗಳೂರು	೧೬೪೦೭	೬೫೭೩	೧೫೯೮೦
೭	ಚಿತ್ರದುರ್ಗ	೩೦೩೭೫	೭೦೧೦	೩೭೩೮೬
೮	ದಕ್ಷಿಣ ಕನ್ನಡ	೩೨೨೭೦	೧೫೨೭೩	೪೭೫೪೩
೯	ಧಾರವಾಡ	೫೩೨೯೫	೮೫೨೬	೬೧೮೨೧
೧೦	ಗುಲ್ಬರ್ಗಾ	೨೭೨೬೦	೩೧೭೨	೩೦೪೫೨
೧೧	ಹಾಸನ	೨೪೮೫೭	೫೮೦೫	೨೯೮೬೨
೧೨	ಉತ್ತರ ಕನ್ನಡ	೨೩೧೩೯	೬೧೨೪	೩೦೨೬೩
೧೩	ಕೋಲಾರ	೦೪೪೯೫	೭೧೯೩	೪೦೬೪೮
೧೪	ಕೊಡಗು	೭೭೨೧	೩೯೫೦	೧೧೬೭೧
೧೫	ಮಂಡ್ಯ	೨೦೮೭೭	೪೫೪೪	೨೫೪೨೧
೧೬	ಮೈಸೂರು	೪೬೭೫೮	೧೨೪೧೧	೫೯೧೬೯
೧೭	ರಾಯಚೂರು	೨೧೦೭೬	೨೫೬೪	೨೩೬೪೦
೧೮	ಶಿವಮೊಗ್ಗ	೩೫೪೪೧	೮೭೮೬	೪೪೬೭೭
೧೯	ತುಮಕೂರು	೩೯೧೪೭	೯೩೯೮	೪೮೫೪೫
	ಒಟ್ಟು ಮೊತ್ತ	೮೦೪೪೩೬೨	೧೪೫೯೧೪	೯೯೦೨೭೬

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಶ್ರೀಮಂತಿ ಕೆ. ಎಸ್. ನಾಗರತ್ನಮ್ಮನವರ ಪರವಾಗಿ).— ಸ್ವಾಮಿ, ಮೊದಲನೇಯ ಪ್ರಶ್ನೆಗೆ ಉತ್ತರವಾಗಿ ಪುರುಷರು ೮,೦೪೩ ಜನ ಮತ್ತು ಮಹಿಳೆಯರು ೧,೮೫೯ ಜನ ಜೀವಂತ ದಾಖಲೆಯಲ್ಲಿದ್ದ ನಿರುದ್ಯೋಗಿ ಅಭ್ಯರ್ಥಿಗಳು ಎಂದು ಹೇಳಿದ್ದೀರಿ. ಇದರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದವರು ಎಷ್ಟು ಮಂದಿ ಇದ್ದಾರೆ ?

ಎರಡನೆಯದಾಗಿ, ಇವರಲ್ಲಿ ಮೆಟ್ರಿಕ್ ಪಾಸ್ ಆದವರು ಅಥವಾ ೭ನೇ ತರಗತಿಗೆ ಮೇಲ್ಪಟ್ಟು ವಿದ್ಯೆ ಕಲಿತಿರತಕ್ಕವರು ಎಷ್ಟು ಜನ ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ರಿಜಿಸ್ಟರ್ ಮಾಡಿಸಿದ್ದಾರೆಂಬುದನ್ನು ಹೇಳುತ್ತೀರಾ ?

ಇನ್ನು ಒಟ್ಟು ೯,೯೦,೨೭೬ ಜನ ನಿರುದ್ಯೋಗಿಗಳು ಏನಾ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ಹೆಸರನ್ನು ರಿಜಿಸ್ಟರ್ ಮಾಡಿಸಿಕೊಂಡಿದ್ದಾರೆ ಇವರೆಲ್ಲರಿಗೂ ನೀವು ಯಾವ ಸ್ಕೀಂಲ್ಲಿ ಉದ್ಯೋಗಗಳನ್ನು, ಕೊಡುವುದಕ್ಕೆ ಯೋಜನೆ ಹಾಕಿಕೊಂಡಿದ್ದೀರಿ ? ಅನೇಕ ಫ್ಯಾಕ್ಟರಿಗಳಲ್ಲಿ ಸ್ಕೂಲ್-ಕಾಲೇಜುಗಳಲ್ಲಿ ಏನು ಮಾಡುತ್ತಾರೆಂದರೆ, ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನವರನ್ನು ನೆಗ್ಲೆಟ್ ಮಾಡಿ ತಾವೇ ನೇರವಾಗಿ ನೇಮಕಾತಿಯನ್ನು ಮಾಡಿಕೊಳ್ಳುತ್ತಾರೆ. ಉದಾಹರಣೆಗೆ ಹೇಳುವುದಾದರೆ, ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಇದೆ. ಇವರು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನವರನ್ನು ಕೇಳಲೇ ಇಲ್ಲ. ಮಾನ್ಯ ದೇವೇಗೌಡರು ಹೇಳಿದರು, ಇವರು ಅಪಾಯಿಂಟ್‌ಮೆಂಟ್ ಮಾಡಿಕೊಂಡರು. ಹೀಗಾದರೆ ರೋಸ್ಟರ್ ಸಿಸ್ಟಂನ್ನು ಮೆನ್‌ಟೇನ್ ಮಾಡುವುದಕ್ಕಾಗುವುದಿಲ್ಲ. ಅಲ್ಲಿ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ರಿಜಿಸ್ಟರ್ ಮಾಡಿಸಿದವರು ಸಂಖ್ಯೆನೆ ಕಾದುಕೊಂಡು ಕುಳಿತುಕೊಳ್ಳಬೇಕಾಗುತ್ತದೆ. ಇಂಥಾದನ್ನು ಅವಾಯ್ಡ್ ಮಾಡುವುದಕ್ಕೆ ನೀವು ಏನು ವ್ಯವಸ್ಥೆ ಮಾಡುತ್ತೀರಿ ? ಇವರಿಗೆ ಉದ್ಯೋಗ ಕೊಡುವುದಕ್ಕೆ ಏನು ಯೋಜನೆಯನ್ನು ಹಾಕಿಕೊಳ್ಳುತ್ತೀರೆಂಬುದನ್ನು ತಿಳಿಸುತ್ತೀರಾ ?

ಶ್ರೀ ಎಸ್. ಕೆ. ಕಾಂತ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರತಕ್ಕದ್ದು ಯಾವ ಯಾವ ಎಜುಕೇಷನ್ ಫೀಲ್ಡ್‌ನಲ್ಲಿ ಎಷ್ಟೆಷ್ಟು ಜನರು ತಮ್ಮ ತಮ್ಮ ಹೆಸರುಗಳನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ನೋಂದಣಿ ಮಾಡಿಸಿದ್ದಾರೆಂದು ಕೇಳಿದ್ದಾರೆ. ಅದಕ್ಕೆ ಫಿಗರ್ಸ್ ಈ ರೀತಿ ಇದೆ.

೧)	ಸ್ನಾತಕೋತ್ತರ ಪದವೀಧರರು	೬೮೯೨
೨)	ಕಲೆ, ವಿಜ್ಞಾನ, ವಾಣಿಜ್ಯ ಪದವೀಧರರು	೬೫೦೫೫
೩)	ಇಂಜಿನಿಯರಿಂಗ್ ಪದವೀಧರರು	೭೨೭೭
೪)	ವೈದ್ಯಕೀಯ ಪದವೀಧರರು	೭೨೬
೫)	ಇತರೇ ಪದವೀಧರರು (ಕೃಷಿ ತೋಟಗಾರಿಕೆ ಇತ್ಯಾದಿ)	೧೪೭೨೦
೬)	ಡಿಪ್ಲೊಮಾ ಹೋಲ್ಡರ್ಸ್	೧೬೯೨೩
೭)	ಟಿ. ಟಿ. ಸಿ. ಐ.ಟಿ.ಸಿ. ಪ್ರಮಾಣಪತ್ರ ಹೊಂದಿರುವವರು	೨೫೯೮೭
೮)	ಎಸ್. ಎಸ್. ಎಲ್. ಸಿ. ಪಾಸ್ ಆದವರು	೫೩೮೦೦೦
೯)	ಎಸ್. ಎಸ್. ಎಲ್. ಸಿ. ಆಗದೇ ಇರುವವರು	೧೭೨೩೫೨

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿ ಪಂಗಡದವರು ಇದ್ದಾರೆಂಬುದನ್ನು ಹೇಳಬೇಕು.

ಎರಡನೆಯದಾಗಿ, ಒಟ್ಟು ೯,೯೦,೨೭೬ ಜನ ನಿರುದ್ಯೋಗಿಗಳು ಏನಿದ್ದಾರೆ ಇವರ ನಿರುದ್ಯೋಗ ಸಮಸ್ಯೆಯನ್ನು ಹೋಡೆದೋಡಿಸುವುದಕ್ಕೆ ನೀವು ಯಾವ ಯೋಜನೆಯನ್ನು ಹಾಕಿಕೊಳ್ಳುತ್ತೀರಿ ? ಇವತ್ತು ಏನಾಗಿದೆ ಎಂದರೆ ಪ್ರೈವೇಟ್ ಇಂಡಸ್ಟ್ರೀಸ್‌ನಲ್ಲಿ, ಪಬ್ಲಿಕ್ ಸೆಕ್ಟಾರ್‌ನಲ್ಲಿ ಮತ್ತು ಗೌರ್ನಮೆಂಟ್ ಕಾರ್ಪೊರೇಷನ್‌ಗಳವರು ಈಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನವರಿಂದ ಪಟ್ಟಿಯನ್ನು ಕೇಳದೆ, ರೂಲ್ಸ್‌ನ್ನು ವಯಲೇಟ್ ಮಾಡಿ ಮನಸ್ಸಿಗೆ ಬಂದಂತೆ ನೇಮಕಾತಿಗಳನ್ನು ಮಾಡಿಕೊಳ್ಳುತಿದ್ದಾರೆ. ಇವರ ಮೇಲೆ ನೀವು ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಆದರಲ್ಲೂ ಪಬ್ಲಿಕ್ ಸೆಕ್ಟಾರ್ಸ್ ಮತ್ತು ಕಾರ್ಪೊರೇಷನ್‌ಗಳ ಮೇಲೆ ಏನುಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುತ್ತೀರೆಂಬುದನ್ನು ತಿಳಿಸಬೇಕು.

ಶ್ರೀ ಎಸ್. ಕೆ. ಕಾಂತ.—ಮಾನ್ಯ ಅಧ್ಯಕ್ಷರೆ. ಪಡ್ಯೂಲ್ಡ್ ಕ್ಯಾಸ್ಟ್ ಮತ್ತು ಪಡ್ಯೂಲ್ಡ್ ಟ್ರೈಬ್ಸ್‌ನ ಜನರು ಎಷ್ಟು ಜನ ಎಂಪ್ಲಾಯ್‌ಮೆಂಟ್‌ನಲ್ಲಿ ರಿಜಿಸ್ಟರ್ ಮಾಡಿಸಿದ್ದಾರೆಂಬುದಕ್ಕೆ ನನಗೆ ಹತ್ತಿರ ವಿವರಗಳಿಲ್ಲ, ಆದರೆ ೮೭–೮೮ರಲ್ಲಿ ಅಂದರೆ ೧-೪-೮೭ ರಿಂದ ೩೧-೩-೮೮ ರವರೆಗೆ ಉದ್ಯೋಗಾವಕಾಶವನ್ನು ಒದಗಿಸಿಕೊಟ್ಟಿರುವ ೨.೩೭೧ ಅಭ್ಯರ್ಥಿಗಳ ಪೈಕಿ ೧೬೫೮ ಜನ ಪರಿಶಿಷ್ಟ ಜಾತಿಯವರೂ, ೫೬೬ ಜನ ಪರಿಶಿಷ್ಟ ಪಂಗಡದವರೂ ಇದ್ದಾರೆ. ಇದರಲ್ಲಿ ೨೫೧ ಜನ ಅಂಗವಿಕಲರಿಗೆ ಕೂಡ ಉದ್ಯೋಗವನ್ನು ಕೊಟ್ಟಿದ್ದೇವೆ. ತಾವು ಕೇಳಿರತಕ್ಕ ಮುಖ್ಯವಾದ ಪ್ರಶ್ನೆ ಏನೆಂದರೆ ಇಷ್ಟು ದೊಡ್ಡ ಸಂಖ್ಯೆಯಲ್ಲಿರತಕ್ಕ ಜನರಿಗೆ ಉದ್ಯೋಗವನ್ನು ಕೊಡುವುದಕ್ಕೆ ಏನು ಯೋಜನೆಯನ್ನು ಹಾಕಿಕೊಂಡಿದ್ದೀರಿ ಎಂಬುದು ಮತ್ತು ಎರಡನೆಯದಾಗಿ, ಪ್ರೈವೇಟ್ ಸೆಕ್ಟಾರ್ ಮತ್ತು ಪಬ್ಲಿಕ್ ಸೆಕ್ಟಾರ್‌ಗಳಲ್ಲಿ ಉದ್ಯೋಗ ಸೂಕ್ತ ರೀತಿಯಲ್ಲಿ ಕೊಡುವಂತೆ ಮಾಡಲು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದೂ ಕೇಳಿದ್ದೀರಿ.

ನಾನು ಅಧಿಕಾರಕ್ಕೆ ಬಂದ ಸಮಯದಲ್ಲಿ ಕೆಲವು ಪಬ್ಲಿಕ್ ಸೆಕ್ಟಾರ್‌ನವರು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಿಂದಲೇ ಅಭ್ಯರ್ಥಿಗಳನ್ನು ತೆಗೆದುಕೊಳ್ಳುವುದಿಲ್ಲ ಎಂದು ಸುಪ್ರೀಂ ಕೋರ್ಟಿನಲ್ಲಿ ಚಾಲೆಂಜ್ ಮಾಡಿದ್ದರು. ಕಾನ್‌ಸ್ಟಿಟ್ಯೂಷನಲ್ ಚಾಲೆಂಜ್ ಮಾಡಿದ್ದರು. ಸುಪ್ರೀಂ ಕೋರ್ಟಿನವರು, ಪರ್ಟಿಕ್ಯುಲರಾಗಿ ಪಬ್ಲಿಕ್ ಸೆಕ್ಟಾರ್‌ನವರು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಿಂದ ತೆಗೆದುಕೊಳ್ಳಬೇಕೆಂದು ಹೇಳಿದರು. ನಾವು ಈಗಾಗಲೇ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಂಸ್ಥೆಗಳಿಗೆ ಪತ್ರ ಬರೆದಿದ್ದೇವೆ. ೧೨೫೦ ರೂಪಾಯಿಗಿಂತ ಹೆಚ್ಚಾಗಿ ಸಂಬಳ ಇರತಕ್ಕ ಅಪಾಯಿಂಟ್‌ಮೆಂಟ್‌ಗಳನ್ನು ಮಾಡುವಾಗ ಎಂಪ್ಲಾಯ್ಮೆಂಟ್ ಎಕ್ಸ್‌ಚೇಂಜಿನಿಂದಲೇ ಮಾಡಬೇಕೆಂದೂ ಸುತ್ತೋಲೆ ಕಳುಹಿಸಿದ್ದೇವೆ. ಕಾರ್ಪೊರೇಷನ್‌ನಿಂದ ತಾವೇ ನೇರವಾಗಿ ಭರ್ತಿ ಮಾಡುತ್ತಿದ್ದಾರೆ ಎಂದು ಹೇಳಿದಿರಿ. ನಾನು ಎಲ್ಲಾ ಕಾರ್ಪೊರೇಷನ್‌ಗಳು ಮತ್ತು ರಾಜ್ಯದ ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ಗೆ ಕೂಡ ಈ ಸುತ್ತೋಲೆ ಕಳುಹಿಸಿದ್ದೇನೆ. ಒಂದು ವೇಳೆ ಈ ಪ್ರಕಾರ ಅವರು ಮಾಡದೇ ಇದ್ದರೆ ಅವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವ ಮಾತನ್ನು ಈ ಸದನದಲ್ಲಿ ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಇದನ್ನು ಏತಕ್ಕೆ ಕೇಳುತ್ತಿದ್ದೇನೆ ಎಂದರೆ ೯ ಲಕ್ಷ ೯೦ ಸಾವಿರ ಅಭ್ಯರ್ಥಿಗಳಲ್ಲಿ ಎಂಪ್ಲಾಯ್ಮೆಂಟ್ ಎಕ್ಸ್‌ಚೇಂಜ್‌ನಿಂದ ಹುದ್ದೆ ಕೊಟ್ಟಿರುವುದು ಕೇವಲ ೮,೩೭೧ ಮಾತ್ರ ನಿಮ್ಮ ಕಣ್ಣಿದುರಿಗೇ ಅನೇಕ ವಿಚಾರಗಳು ನಡೆಯುತ್ತವೆ. ತಪ್ಪುಗಳು ಕೂಡ ಅನೇಕ ಅಪ್ಲಿಕೇಷನ್ಸ್ ಬಂದಿರಬೇಕಂ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ನಲ್ಲಾಗಲೀ ಇನ್ನೊಂದು ಕಡೆಯಾಗಲೀ ಒಂದು ಮಾತು ಹೇಳಿ ನೀವು ಒಂದು ಮಾತು ಹೇಳಿದರೆ, ಅಪಾಯಿಂಟ್‌ಮೆಂಟ್ ಆಗುತ್ತದೆ ಎಂದು ಜನ ಬರುತ್ತಾರೆ. ಅದರ ಅರ್ಥ ಎಂಪ್ಲಾಯ್ಮೆಂಟ್ ಎಕ್ಸ್‌ಚೇಂಜ್ ಜೀವಂತವಾಗಿದ್ದರೂ ಕೂಡ ಅದಕ್ಕೆ ಬೆಲೆ ಇಲ್ಲ. ನೇರವಾಗಿ ಅಪ್ಲಿಕೇಷನ್ ಕೊಟ್ಟರೆ ಅಪಾಯಿಂಟ್ ಆಗಂತ್ತದೆಂದು ಬರುತ್ತಾರೆ. ಇದನ್ನು ತಪ್ಪಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಒಂದೊಂದು ಕಾರ್ಪೊರೇಷನ್‌ನಲ್ಲೂ ಅವರವರ ಕಮ್ಯುನಿಟಿಯವರನ್ನು ಅಪಾಯಿಂಟ್ ಮಾಡಿಕೊಳ್ಳುತ್ತಾರೆ. ನಾಳೆ ರಾಚಯ್ಯನವರು ಬಂದರೆ ಅವರ ಕಮ್ಯುನಿಟಿಯವರಿಗೆ ಕೊಡುತ್ತಾರೆ. ಬೊಮ್ಮಾಯಿಯವರು ಬಂದರೆ ಅವರ ಕಮ್ಯುನಿಟಿಯವರಿಗೆ, ಬಸಪಣ್ಣಪ್ಪನವರು ಬಂದರೆ ಅವರ ಕಮ್ಯುನಿಟಿಗೆ, ನಾನು ಬಂದರೆ ನನ್ನ ಕಮ್ಯುನಿಟಿಗೆ ಮಾಡುತ್ತೇವೆ. ಈ ಜಾತಿ ಪಿಡುಗು ಇದ್ದೇ ಇರುತ್ತದೆ. ಎಷ್ಟೇ ಇಲ್ಲ ಎಂದರೂ ೯೨ ಪರ್ಸೆಂಟ್ ಅವರ ಜಾತಿಯವರನ್ನೇ ತುಂಬುತ್ತಾರೆ. ಕಾರ್ಪೊರೇಷನ್‌ನಲ್ಲಾಗಲೀ ಪಬ್ಲಿಕ್ ಸೆಕ್ಟಾರ್‌ನಲ್ಲಾಗಲೀ ಮ್ಯಾನೇಜಿಂಗ್ ಡೈರೆಕ್ಟರ್ ಇದ್ದರೆ ಅವರಿಗೆ ಬೇಕಾದವರನ್ನು ತುಂಬಿಸಿಕೊಳ್ಳುತ್ತಾನೆ. ಎಂಪ್ಲಾಯ್ಮೆಂಟ್ ಎಕ್ಸ್‌ಚೇಂಜ್ ಮೂಲಕ ಹೋದರೆ ರೋಸ್ಟರ್ ಸಿಸ್ಟಂ ಫಾಲೊ ಆಗುತ್ತದೆ. ಎಲ್ಲರಿಗೂ ನ್ಯಾಯ ಸಿಗುತ್ತದೆ. ಯಾರು ರೋಸ್ಟರ್ ಸಿಸ್ಟಂ ಫಾಲೊ ಮಾಡುವುದಿಲ್ಲ ಅಂಥವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಂಡರೆ ಮುಂದೆ ಆ ರೀತಿ ಮಾಡುವುದಕ್ಕೆ ಯಾರಿಗೂ ಧೈರ್ಯ ಬರುವುದಿಲ್ಲ. ಆದ್ದರಿಂದ ಇದನ್ನು ಗವರ್ನಮೆಂಟಿಗೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ನಿರುದ್ಯೋಗ ಸಮಸ್ಯೆ ಪರಿಹಾರಕ್ಕೆ ಏನಾದರೂ ಹೊಸ ಯೋಜನೆಯನ್ನು ಹಾಕಬೇಕೆಂದು ನಾನು ಕೇಳಿಕೊಂಡಿದ್ದೆ. ಅದರ ಬಗ್ಗೆ ತಾವು ಹೇಳಲಿಲ್ಲ, ಎಂಪ್ಲಾಯ್ಮೆಂಟ್ ಪ್ರೊವೈಡ್ ಮಾಡುವುದಕ್ಕೆ ಲೇಬರ್ ಡಿಪಾರ್ಟ್‌ಮೆಂಟಿನಿಂದ ಏನಾದರೂ ಮಾಡಬೇಕಲ್ಲ. ೭೦೦ ಡಾಕ್ಟರ್ಸ್, ಸುಮಾರು ೪,೦೦೦ ಇಂಜಿನಿಯರ್ಸ್ ಅನೇಕ ಗ್ರಾಜುಯೇಟ್ಸ್ ಇವರೆಲ್ಲರ ಸಮಸ್ಯೆ ಬಗ್ಗೆ

ಯಾವುದೇ ಸರ್ಕಾರ ಬಂದರೂ ಫೀಡ್ ಮಾಡುವುದಕ್ಕೆ ಕಷ್ಟವಾಗುತ್ತದೆ. ನಾಳೆ ನಾವು ಬಂದರೂ ನಮಗೆ ಕಷ್ಟವಾಗತ್ತದೆ. ಇವರ ಬಗ್ಗೆ ಏನಾದರೂ ಚಿಂತನೆ ಮಾಡಿ ಪ್ಲಾನ್ ಇವ್ಯಾಲ್ಯುಯೇಟ್ ಮಾಡಬೇಕಾಗುತ್ತದೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಉಪನಾಯಕರು ಹೇಳಿದಂತೆ ಈ ಸರ್ಕಾರ ನಡೆದುಕೊಂಡು ಬಂದಿದೆ ನಾಲ್ಕು ವರ್ಷಗಳ ಹಿಂದೆ ಪಬ್ಲಿಕ್ ಅಂಡರ್‌ಕೇ ಕಿಂಗ್ಸ್ ಎಲ್ಲಿದೆ ಅಲ್ಲಿ ರೋಸ್ಟರ್ ಸಿಸ್ಟಂ ಪ್ರಕಾರ ಅಪಾಯಿಂಟ್ ಮಾಡತಕ್ಕ ಆಜ್ಞೆಯನ್ನು ಸರ್ಕಾರ ಹೊರಡಿಸಿದೆ. ಪ್ರತಿ ಆರು ತಿಂಗಳಿಗೊಮ್ಮೆ ರೆವ್ಯೂ ಮಾಡುವುದಕ್ಕೆ ಕರೆದು ಹೇಳಿದ್ದೇನೆ. ಆಜ್ಞೆಯನ್ನು ವಯಲೇಟ್ ಮಾಡುವವರ ಮೇಲೆ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳುವ ಬಗ್ಗೆ ಹೇಳಿದ್ದೇವೆ. ಇತ್ತೀಚೆಗೆ ಆ ರೀತಿ ಆಗುವುದು ಕಡಿಮೆಯಾಗಿದೆ. ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲಿ ರೋಸ್ಟರ್ ಸಿಸ್ಟಂ ಫಾಲೊ ಮಾಡುತ್ತಿದ್ದಾರೆ. ಎಲ್ಲಿ ವಯಲೇಟ್ ಆಗಿದೆಯೋ ಅಲ್ಲಿ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇವೆ. ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ವಿಚಾರ ಅವರು ಎತ್ತಿದ್ದಾರೆ. ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ನಲ್ಲಿ ಈಗ ಆಗಿರತಕ್ಕ ಅಪಾಯಿಂಟ್‌ಮೆಂಟ್ಸ್ ಟೆಂಪೊರರಿ. ಮುಂದೆ ಮಾಡುವಾಗ ರೋಸ್ಟರ್ ಸಿಸ್ಟಂ ಪ್ರಕಾರ ಮಾಡುತ್ತೇವೆ. ಈ ದಿಸೆಯಲ್ಲಿ ತಮ್ಮ ಸಲಹೆ ಉತ್ತಮವಾದುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಟೆಂಪೊರರಿ ಎಂದು ಈಗ ಹೇಳುತ್ತೀರಿ. ನಾಳೆ ದಿವಸ ಅವರು ಲಗ್ನ ಆಗಂತ್ತಾರೆ. ನಮಗೆ ಕಷ್ಟ ಇದೆ ಖಾಯಂ ಮಾಡಿ ಎಂದು ಹೇಳುತ್ತಾರೆ. ನಾವು ಕೂಡ ಕಾಲ್ ಅಟೆನ್‌ಷನ್ ತಂದು ಕೇಳುತ್ತೇವೆ. ನೀವೂ ಮಾಡುವುದಿಲ್ಲ ಎಂದು ಹೇಳಿ ಮಾಡುತ್ತೀರಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ಬಗ್ಗೆ ಮೊನ್ನೆ ನೀವು ಕೇಳಿದಾಗ ಉತ್ತರ ಹೇಳಲಿಲ್ಲ. ಇವತ್ತು ನೀವು ಹೇಳಿದ್ದರಿಂದ ನಾನು ಹೇಳುತ್ತಿದ್ದೇನೆ. ಈಗ ಅಲ್ಲಿ ಮಾಡಿರುವುದು ಟೆಂಪೊರರಿ ಅಪಾಯಿಂಟ್‌ಮೆಂಟ್ಸ್ ಮುಂದೆ ರೋಸ್ಟರ್ ಸಿಸ್ಟಂ ಪ್ರಕಾರ ಖಾಯಂ ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕೊನೆಯದಾಗಿ.....

ಅಧ್ಯಕ್ಷರು.—ಎಷ್ಟು ಸಾರಿ ಕೊನೆಯದಾಗಿ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎಷ್ಟು ಸಾರಿ ಕೊನೆ ಎಂದರೆ ? ಒಂದೇ ಸಾರಿ ಕೊನೆ ಇರಂವುದು. ಎಷ್ಟು ಫ್ಯಾಕ್ಟರಿಗಳು ಮತ್ತು ಪಬ್ಲಿಕ್ ಅಂಡರ್‌ಟೇಕಿಂಗ್ಸ್ ರೂಲ್ಸ್ ವಯಲೇಟ್ ಮಾಡಿವೆ ? ಎಷ್ಟು ಜನರ ಮೇಲೆ ಕೇಸ್ ಹಾಕಿದ್ದೀರಿ ?

ಶ್ರೀ ಎಸ್.ಆರ್. ಬೊಮ್ಮಾಯಿ.—ವಯಲೇಟ್ ಮಾಡಿರುವುದು ಇತ್ತೀಚೆಗೆ ಗಮನಕ್ಕೆ ಬಂದಿಲ್ಲ. ವಯಲೇಟ್ ಮಾಡಿದ್ದರೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್.ಕೆ. ಕಾಂತಾ.—ನಾವು ಸುತ್ತೋಲೆ ಹೊರಡಿಸಿದ್ದೇವೆ. ಅದನ್ನು ವಯಲೇಟ್ ಮಾಡಿರುವುದು ನಿಮ್ಮ ಗಮನಕ್ಕೆ ಬಂದರೆ ಹೇಳಿ. ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ತಯಾರಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ನವರು ವಯಲೇಟ್ ಮಾಡಿದ್ದಾರಲ್ಲ. ಅವರ ಮೇಲೆ ಕ್ರಮ ತೆಗೆದುಕೊಳ್ಳಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ಅದು ಟೆಂಪೊರರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರ ಗಮನಕ್ಕೆ ತಂದರೂ ಕ್ರಮ ತೆಗೆದುಕೊಳ್ಳುವುದಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ಖಾಯಂ ಮಾಡುವಾಗ ರೋಸ್ಟರ್ ಸಿಸ್ಟಂ ಪ್ರಕಾರ ಮಾಡುವ ಭರವಸೆ ಕೊಡುತ್ತೇನೆ.